ರಾಜ್ಯದಲ್ಲಿರುವ ಪ್ರವಾಹ ಕಾರ್ಯಾಚರಣೆ ಯೋಜನೆ

ಶ್ರೀ ಮಲ್ಲಿಕಾರ್ಜುನಗೌಡ ಎಸ್. ಹಾಟೀಲ್.—ಮಾನ್ಯ ಪಶುಸಂಗೋಪನೆ, ಮೀನುಗಾರಿಕೆ ಮಂತ್ರಿ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಫ್ಲಡ್ ಆಪರೇಷನ್ ನೀತಿಯಲ್ಲಿ ನೋಂದಣಿ ಮಾಡಿರುವ ಸಂಸ್ಥೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಫ್ಲಡ್ ಕಾರ್ಯ ನೀತಿಯಲ್ಲಿರುವ ಹಾಲಿನ ಸಹಕಾರಿ ಸಂಘಗಳನ್ನು ಫ್ಲಡ್ ಯೋಜನೆಯಡಿಯಲ್ಲಿ ವಿಲೀನ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು ?

(ಇ) ಸದರಿ ಯೋಜನೆಯಡಿಯಲ್ಲಿ ಬಂದಿರುವ ಹಳ್ಳಿಗಳ ಹಾಗೂ ಪಟ್ಟಣಗಳ ಸಂಖ್ಯೆ ಎಷ್ಟು?

(ಈ) ರಾಜ್ಯದಲ್ಲಿ ಎಷ್ಟು ಲೀಟರ್ ಹಾಲನ್ನು ಸಂಗ್ರಹಣೆ ಮಾಡಲಾಗುತ್ತಿದೆ ಜಿಲ್ಲಾವಾರು ಮಾಹಿತಿ ನೀಡುವುದು.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಪಶುಸಂಗೋಪನೆ, ಮೀನುಗಾರಿಕೆ ಮಂತ್ರಿ, ರೇಷ್ಮೆ ಸಚಿವರು).—

(ಅ) ಮತ್ತು (ಆ) ಡಿಸೆಂಬರ್ ೧೯೮೬ರ ವರೆಗೆ ೩೮೭೮ ಹಾಲು ಉತ್ಪಾದಕರ ಸಹಕಾರಿ ಸಂಘಗಳನ್ನು ನೊಂದಾಯಿಸಲಾಗಿದೆ. ಜಿಲ್ಲಾವಾರು ಮಾಹಿತಿಯಂತೆ ಈ ಕೆಳಕಂಡಂತಿದೆ.—

	ಜಿಲ್ಲೆಗಳು		ನೊಂದಾಯಿಸಿದ ಹಾಲು ಉತ್ಪಾದಕರ ಸಹಕಾರಿ ಸಂಘಗಳು
೧	ಬೆಂಗಳೂರು	...	೫೧೪
೨	ಕೋಲಾರ	...	೫೨೬
೩	ಮೈಸೂರು	...	೪೪೭
೪	ಮಂಡ್ಯ	...	೪೧೨
೫	ತುಮಕೂರು	...	೪೦೨
೬	ಹಾಸನ	...	೩೩೭
೭	ಕೊಡಗು	...	೨೫
೮	ಚಿಕ್ಕಮಗಳೂರು	...	೬೬
೯	ಗುಲ್ಬರ್ಗಾ	...	೪೭
೧೦	ಬೀದರ್	...	೧೨೧
೧೧	ದಕ್ಷಿಣ ಕನ್ನಡ	...	೧೧೧
೧೨	ಶಿವಮೊಗ್ಗ	...	೯೬
೧೩	ಚಿತ್ರದುರ್ಗ	...	೪೮
೧೪	ರಾಯಚೂರು	...	೬೫
೧೫	ಬಳ್ಳಾರಿ	...	೪೮
೧೬	ಧಾರವಾಡ	...	೨೭೫
೧೭	ಉತ್ತರ ಕನ್ನಡ	...	೭೦
೧೮	ಬೆಳಗಾಂ	...	೨೩೭
೧೯	ಬಿಜಾಪುರ	...	೧೩೫
		ಒಟ್ಟು	೩೮೭೮

(೫) ಹಳ್ಳಿಗಳ ಸಂಖ್ಯೆ ೧೩೧೪೮
ಪಟ್ಟಣಗಳ ಸಂಖ್ಯೆ ಯಾವುದೂ ಇರುವುದಿಲ್ಲ

(ಈ) ಡಿಸೆಂಬರ್ ೧೯೮೬ರಲ್ಲಿ ಸರಾಸರಿ ದಿನಂಪ್ರತಿ ಜಿಲ್ಲಾವಾರು ಹಾಲಿನ ಸಂಗ್ರಹಣೆ ಈ ರೀತಿ ಇದೆ.—

	ಜಿಲ್ಲೆಗಳು		ಹಾಲಿನ ಸಂಗ್ರಹಣೆ (ಕೆ.ಜಿ.ಗಳಲ್ಲಿ)
೧	ಬೆಂಗಳೂರು	...	೧,೮೫,೭೧೯
೨	ಕೋಲಾರ	...	೧,೮೨,೫೯೮
೩	ಮೈಸೂರು	...	೮೦,೬೧೭
೪	ಮಂಡ್ಯ	...	೧,೧೧,೨೬೦
೫	ತುಮಕೂರು	...	೯೭,೮೩೧
೬	ಹಾಸನ	...	೫೬,೧೬೧
೭	ಚಿಕ್ಕಮಗಳೂರು	...	೬,೮೦೦
೮	ಕೊಡಗು	...	೨,೪೫೯
೯	ಧಾರವಾಡ	...	೩೦,೬೬೯
೧೦	ಉತ್ತರ ಕನ್ನಡ	...	೧೦,೧೨೪
೧೧	ಬೆಳಗಾಂ	...	೪೧,೪೧೮
೧೨	ಬಿಜಾಪುರ	...	೧೬,೧೭೪
೧೩	ಗುಲ್ಬರ್ಗಾ	...	೨,೬೨೨
೧೪	ಬೀದರ್	...	೧೬,೯೧೩
೧೫	ದಕ್ಷಿಣ ಕನ್ನಡ	...	೧೦,೫೪೮
೧೬	ಶಿವಮೊಗ್ಗ	...	೨೦,೭೬೬
೧೭	ಚಿತ್ರದುರ್ಗ	...	೭,೪೮೭
೧೮	ರಾಯಚೂರು	...	೧೦,೨೭೬
೧೯	ಬಳ್ಳಾರಿ	...	೨,೧೯೪
		ಒಟ್ಟು ...	೮,೯೨,೬೩೬

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಫ್ಲಡ್ ಆಪರೇಷನ್ ಸ್ಕೀಮ್ ಕರ್ನಾಟಕದಲ್ಲಿ ಬಂದಮೇಲೆ ತಾವು ಪಶುಸಂಗೋಪನೆ ಮಂತ್ರಿಯಾಗಿ ಏನೋ ಮಾಡಬೇಕು ಎಂದು ತಾವು ಕೂಡಾ ಯೋಚನೆ ಮಾಡಿದ್ದೀರಿ. ೩೮೭೮ ನೊಂದಾಯಿಸಿದ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ತೆರೆದಿದ್ದೀರಿ: ಕರ್ನಾಟಕದಲ್ಲಿ ಸುಮಾರು ೨೫ ಸಾವಿರ ಹಳ್ಳಿಗಳು ಇವೆ, ಇಲ್ಲೆಲ್ಲಾ ಈ ಫ್ಲಡ್ ಆಪರೇಷನ್ ಸ್ಕೀಮನ್ನು ತರಲಿಕ್ಕೆ ಏನು ಪ್ರಯತ್ನವನ್ನು ತಾವು ಮಾಡುತ್ತೀರಿ ? ಮತ್ತೆ ನನ್ನ 'ಆ' ಪ್ರಶ್ನೆ ಓಡಿಹೋಗಿದೆ. ಆದಕ್ಕೆ ಉತ್ತರ ಇಲ್ಲ. ನನ್ನ 'ಆ' ಪ್ರಶ್ನೆಗೆ ತಾವು ಏನು ಉತ್ತರ ಹೇಳುತ್ತೀರಿ, ಅದನ್ನು ಹೇಳಬೇಕು. ಒಟ್ಟು ೮,೯೨,೬೩೬ ಲಕ್ಷ ಕೆ.ಜಿ.ಯಷ್ಟು ಹಾಲಿನ ಸಂಗ್ರಹಣೆಯನ್ನು ಮಾಡುತ್ತಿದ್ದೀರಿ. ಇದರಲ್ಲಿ ಪ್ರತಿ ಲೀಟರ್‌ಗೆ ಎಷ್ಟು ದರ ಕೊಡುತ್ತಿದ್ದೀರಿ ? ಅದನ್ನು ಹೇಳಬೇಕು. ಇನ್ನು ಹೆಚ್ಚಿಗೆ ಒಂದು ರೂಪಾಯಿ ದರವನ್ನು ಕೊಡಲು ಯಾವಾಗಿನಿಂದ ಕಾರ್ಯಕ್ರಮವನ್ನು ತಾವು ತೆಗೆದುಕೊಳ್ಳುತ್ತೀರಿ.? ಪ್ರತಿಯೊಂದು ಹಳ್ಳಿಯಲ್ಲಿಯೂ ಫ್ಲಡ್ ಆಪರೇಷನ್ ಸ್ಕೀಮನ್ನು ತರಲಿಕ್ಕೆ ತಾವು ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಮತ್ತು ಅದರ ಟೋಟಲ್ ಇನ್‌ವೆಸ್ಟ್‌ಮೆಂಟ್ ಎಷ್ಟು ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಹಲವೆಡೆಗಳಲ್ಲಿ ಅಮುಲ್ ಮಾದರಿಯಲ್ಲಿಲ್ಲದ ಸಹಕಾರಿ ಸಂಘಗಳು ಅಸ್ತಿತ್ವದಲ್ಲಿದೆ. ಅವುಗಳನ್ನು ಅಮುಲ್ ಮಾದರಿಗೆ ತರಲು ತೊಂದರೆಗಳೇನೂ ಸರ್ಕಾರಕ್ಕೆ ಇಲ್ಲ. ಆದರೆ ಆಯಾಯ ಸಂಘಗಳು ಅಮುಲ್ ಮಾದರಿಯು ಸೂಚಿಸಿದ

ಉಪ ನಿಬಂಧನೆಗಳನ್ನು ಅಳವಡಿಸಿಕೊಂಡಲ್ಲಿ ಹಾಗೂ ಕೆಲವೊಂದು ಸಹಕಾರಿ ಸಂಘಗಳನ್ನು ಕೂಡಿಸಿ ಸರ್ಕಾರ ಅದನ್ನು ಕೂಡಾ ಅಮುಲ್ ಮಾದರಿಯಲ್ಲಿ ತರಲಿಕ್ಕೆ ಯಾವುದೇ ಅಂದು ನಿಬಂಧನೆ ಇಲ್ಲ. ಆದರೆ ಕೆಲವು ಕಡೆ ಸಹಕಾರ ಸಂಘಗಳ ರಚನೆಯಲ್ಲಿ ತೊಂದರೆಯಾಗಿದೆ, ಅಲ್ಲಿರತಕ್ಕಂಥ ಕಂಡೀಷನ್ಸ್ ಬೇರೆ ಇದೆ. ಅಲ್ಲಿ ಅಮುಲ್ ಮಾದರಿಯ ಕಂಡೀಷನ್ಸ್ ಅಳವಡಿಸಿ ಕೊಂಡಲ್ಲಿ ಅದನ್ನು ಸೇರಿಸಿಕೊಳ್ಳುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇಲ್ಲ. ಈಗ ಕ್ಷೀರಧಾರೆ ಎರಡನೇ ಹಂತದ ಯೋಜನೆಯಡಿಯಲ್ಲಿ ಸಹಕಾರಿ ಸಂಘಗಳನ್ನು ಪ್ರತಿಯೊಂದರಲ್ಲೂ ಗಣನೀಯ ಹಾಲಿನ ಶೇಖರಣೆ ಆಗುತ್ತಿದೆ. ಕಳೆದ ವರ್ಷದ ದಿನಂಪ್ರತಿ ೬.೬೫ ಲಕ್ಷ ಕೆ.ಜಿ. ಹಾಲಿನಿಂದ ೯.೫೫ ಲಕ್ಷ ಕೆ.ಜಿ. ಹಾಲಿಗೆ ಏರಿದೆ. ಅದಕ್ಕೆ ಸಮರ್ಪಕವಾದ ಸಂಸ್ಕರಣೆ ಹಾಗೂ ಶಿಥಲೀಕರಣದ ಸಾಮರ್ಥ್ಯ ಇಲ್ಲದ್ದರಿಂದ ಸಂಘಗಳ ಸಂಘಟನೆಯ ಕಾರ್ಯದಲ್ಲಿ ಮಂದಗತಿಯಲ್ಲಿ ಧೋರಣೆಯನ್ನು ತಾಳಬೇಕಾಗಿದೆ. ಡಿಸೆಂಬರ್ ಮಾಹ ೧೯೮೬ರಲ್ಲಿ ಹಾಲಿನ ಸಂಗ್ರಹಣ ಸರಾಸರಿ ದಿನಂಪ್ರತಿ ೮.೯೨ ಲಕ್ಷ ಕೆ.ಜಿ.ಯಾಗಿದ್ದು ಕಳೆದ ವರ್ಷ ಇದೇ ತಿಂಗಳಲ್ಲಿ ೬.೫೩ ಲಕ್ಷ ಕೆ.ಜಿ. ಇರುತ್ತದೆ. ಭಾರತೀಯ ಹೈನುಗಾರಿಕೆ ನಿಗಮದೊಂದಿಗೆ ಮಾಡಿಕೊಂಡ ಒಪ್ಪಂದದ ಮೇರೆಗೆ ಸಂಸ್ಕರಣೆ ಹಾಗೂ ಶಿಥಲೀಕರಣ ಕೇಂದ್ರಗಳ ಸ್ಥಾಪನೆ ಹಾಗೂ ವಿಸ್ತರಣೆ ಕಾರ್ಯ ಪ್ರಾರಂಭವಾಗಿದ್ದು ಸುಮಾರು ೧೯೯೦ರ ವೇಳೆಗೆ ಪೂರ್ತಿಯಾಗುವ ನಿರೀಕ್ಷೆ ಇದೆ. ಅದು ಪೂರ್ತಿಯಾದಲ್ಲಿ ಸುಮಾರು ೧೫ ಲಕ್ಷ ಲೀಟರ್ ಹಾಲನ್ನು ದಿನಂಪ್ರತಿ ಪಟಿವಾಟು ಮಾಡಲು ಕರ್ನಾಟಕ ಹಾಲು ಮಹಾ ಮಂಡಳಿಗೆ ಸಾಧ್ಯವಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಜನವಸತಿ ಇರುವ ೨೭೦೨೪ ಹಳ್ಳಿಗಳು ಇದ್ದು ಈಗಾಗಲೇ ಸುಮಾರು ೧೩,೧೮೮ ಹಳ್ಳಿಗಳು ಹಾಲು ಉತ್ಪಾದಕರ ಸಹಕಾರ ಸಂಘಗಳ ಕಾರ್ಯವ್ಯಾಪ್ತಿಯಲ್ಲಿವೆ. ಸನ್ಮಾನ್ಯ ಸದಸ್ಯರು ಬೆಲೆ ಬಗ್ಗೆ ಅಂಕಿ ಅಂಶಗಳನ್ನು ಕೇಳಿದ್ದಾರೆ. ಅದು ಪ್ರಶ್ನೆಯಲ್ಲಿಲ್ಲ. ಆದರೂ ಮಾಹಿತಿ ಬೇಕಾದರೆ ಕಳುಹಿಸಿಕೊಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಿಗೆ ಸದಸ್ಯರು ಉಪಪ್ರಶ್ನೆ ಕೇಳಬತ್ತಾರೆನ್ನುವುದು ಗೊತ್ತಿಲ್ಲವೇ ? ನಾನು ಪ್ರಶ್ನೆ ಸಂಖ್ಯೆ (ಅ)ಗೆ ಉತ್ತರ ಕೇಳಿದೆ. ಅದಕ್ಕೆ ಸರಿಯಾದ ಉತ್ತರ ಬಂದಿಲ್ಲ. ನಮ್ಮ ತಾಲ್ಲೂಕಿನಲ್ಲಿ ಒಂದು ಡೈರಿ ಸಹಕಾರ ಸಂಘ ಇದ್ದು ಇಪ್ಪತ್ತು ವರ್ಷಗಳಿಂದ ಕೆಲಸ ಮಾಡುತ್ತಾ ಬಂದಿದೆ. ಈ ಸೊಸೈಟಿಯಿಂದ ಫೆಡರೇಷನ್‌ನವರು ಹಾಲು ಏಕೆ ತೆಗೆದುಕೊಳ್ಳುತ್ತಿಲ್ಲ ? ತಾವು ಸ್ಪರ್ಧಿಗಳಾಗಿದ್ದೀರಿ. ಈ ಹಾಲನ್ನು ತೆಗೆದುಕೊಳ್ಳುವುದಕ್ಕೆ ಏಕೆ ಪ್ರಯತ್ನಪಡುತ್ತಿಲ್ಲ ? ಇದನ್ನು ಆದರಲ್ಲಿ ವಿಲೀನ ಮಾಡುವುದಕ್ಕೆ ಯಾವ ಕಾರ್ಯಕ್ರಮ ತೆಗೆದು ಕೊಂಡಿದ್ದೀರಿ ? ನೀವು ಈ ಸಹಕಾರ ಸಂಘಗಳಿಂದ ಹಾಲು ತೆಗೆದುಕೊಳ್ಳದಿದ್ದರೆ ಸಂಘದ ಸದಸ್ಯರಾಗಿರತಕ್ಕ ಸಾಮಾನ್ಯ ಸದಸ್ಯರಿಗೆ ಬಹಳ ತೊಂದರೆಯಾಗುತ್ತಿದೆ. ಅಲ್ಲದೆ ಅಲ್ಲಿ ಬರಗಾಲ ಪರಿಸ್ಥಿತಿ ಬೇರೆ ಇದೆ. ನೀವು ಈ ರೀತಿಯ ಸಹಕಾರ ಸಂಘಗಳನ್ನು ಸ್ಥಾಪಿಸಲು ಇರುವ ಕಂಡಿಷನ್ಸ್ ಏನು ? ಇವುಗಳನ್ನು ಹೆಚ್ಚಿನ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೀರಿ ?

ಸಭಾಧ್ಯಕ್ಷರು.—ನೀವು ೩-೪ ಪ್ರಶ್ನೆಗಳನ್ನು ಒಂದೇ ಸಲ ಕೇಳಿದರೆ ಅವರು ಉತ್ತರ ಹೇಗೆ ಹೇಳಬೇಕು.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಪಾಟೀಲರು ಅಮೂಲ್ ಮಾದರಿಯ ಸಹಕಾರ ಸಂಘಗಳನ್ನಾಗಿ ಯಾವರೀತಿ ಪರಿವರ್ತನೆಯನ್ನು ಮಾಡುತ್ತೀರೆಂದು ನೇರವಾಗಿ ಕೇಳಿದ್ದರೆ ನಾನು ಉತ್ತರ ಕೊಡುತ್ತಿದ್ದೆ. ಈ ಅಮೂಲ್ ಮಾದರಿಯ ಸಹಕಾರ ಸಂಘಗಳನ್ನು ಸ್ಥಾಪಿಸುವುದಕ್ಕೆ ಕೆಲವು ನಿಬಂಧನೆಗಳಿವೆ, ಅವುಗಳೆಂದರೆ.—

೧ ಪ್ರಾಸ್ತಾವಿತ ಡೈರಿ ಸಹಕಾರ ಸಂಘದ ಕಾರ್ಯಾಚರಣೆ ಕ್ಷೇತ್ರದಲ್ಲಿ ಕನಿಷ್ಠಪಕ್ಷ ೧೫೦ ತಳಿರೆಬ್ಬಿಸ ಬಹುದಾದ ಜಾನುವಾರು ಇರಬೇಕು.

೨. ಬತ್ತಿದ ಕಾಲದಲ್ಲಿ ಒಂದು ದಿನಕ್ಕೆ ಸರಾಸರಿಯಾಗಿ ಕನಿಷ್ಠಪಕ್ಷ ೧೦೦ ಲೀಟರ್‌ಗಳಷ್ಟು ಮಾರುಕಟ್ಟೆಯಲ್ಲಿ ಪಸಾರಬಹುದಾದ ಅಧಿಕ ಹಾಲು ಇರಬೇಕು.

೩. ಒಂದು ಡೈರಿ ಸಹಕಾರ ಸಂಘದ ಎರಡು ಕಿಲೋಮೀಟರ್ ವ್ಯಾಪ್ತಿಯೊಳಗೆ ಮತ್ತೊಂದು ಡೈರಿ ಸಹಕಾರ ಸಂಘವನ್ನು ಸ್ಥಾಪಿಸಬಾರದು.

೪. ಮಾರುಕಟ್ಟೆಯಾಗಬಲ್ಲ ಅಧಿಕ ಹಾಲನ್ನು ಹಾಲಿನ ಉತ್ಪನ್ನಗಳಾದ ಕ್ರೀಂ, ತುಪ್ಪ, ಕೋವ ಮೈರೆಗಳಿಗಾಗಿ ಪರಿವರ್ತನೆ ಮಾಡಲು ಸಾಧ್ಯವಾದ ಸ್ಥಳಗಳಿಗೆ ಆದ್ಯತೆಯನ್ನು ನೀಡಬೇಕಂ.

೫. ಎಲ್ಲಾ ಋತುಮಾನಗಳ ರಸ್ತೆಯಿಂದ ಡೈರಿ ಸಹಕಾರ ಸಂಘಗಳು ೮ ಕಿಲೋಮೀಟರ್ ವ್ಯಾಪ್ತಿಯೊಳಗೆ ಇರುವುದು ಸಾಮಾನ್ಯ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಕೊನೆಯ ಪ್ರಶ್ನೆ ಒಂದು ಲೀಟರ್ ಹಾಲಿಗೆ ಯಾವಾಗಿನಿಂದ ಬೆಲೆ ಹೆಚ್ಚು ಮಾಡುತ್ತೀರಿ ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಈ ಪ್ರಶ್ನೆ ನಮ್ಮ ಮುಂದಿಲ್ಲ. ಸದ್ಯದಲ್ಲಿ ಹಾಲಿನ ದರ ಏರಿಸುವುದಿಲ್ಲ.

ಅಧ್ಯಕ್ಷರು.—ಶ್ರೀ ಆರ್. ಎನ್. ನಾಯಕರವರೆ, ತಮ್ಮ ಪ್ರಶ್ನೆ ೧೦ನೇ ತಾರೀಖಿನ ಮುಂಗಳವಾರಕ್ಕೆ ಹೋಗಿದೆ.

ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿರುವ ಹರಿಜನ ಗಿರಿಜನರು

೫೯. ಶ್ರೀಮತಿ ಸುಭದ್ರಾ ವಸಂತ (ವಿರಾಜಪೇಟೆ).— ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಕೊಡಗು ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿರುವ ಹರಿಜನ ಗಿರಿಜನ ಕುಟುಂಬದವರ ಸಂಖ್ಯೆ ಎಷ್ಟು ಮತ್ತು ಎಷ್ಟು ವರ್ಷಗಳಿಂದ ವಾಸಿಸುತ್ತಿದ್ದಾರೆ ?

(ಆ) ಅವರ ಆರ್ಥಿಕ ಸುಧಾರಣೆ ಹಾಗೂ ಇತರ ಸೌಲಭ್ಯಗಳಿಗೆ ಏನಾದರೂ ಯೋಜನೆಗಳಿವೆಯೆ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ, ಹಾಗೂ ಭೂ ವಿಜ್ಞಾನ ಮಂತ್ರಿಗಳು).—

(ಅ) ಹರಿಜನ ಸಂಖ್ಯೆ ೧೫೫ ಗಿರಿಜನ ಸಂಖ್ಯೆ ೧೩೦೬
ಇವರು ಅನಾದಿಕಾಲದಿಂದ ವಾಸಿಸುತ್ತಿದ್ದಾರೆ. ನಿರ್ದಿಷ್ಟವಾಗಿ ಯಾವ ವರ್ಷದಿಂದ ವಾಸಿಸುತ್ತಿದ್ದಾರೆ ಎಂದು ಇನ್ನೂ ತಿಳಿದು ಬಂದಿಲ್ಲ.

(ಆ) ಇದೆ. ಅರಣ್ಯ ಇಲಾಖೆಗೆ ಸಂಬಂಧಪಟ್ಟ ವಿವರವನ್ನು ಕೆಳಗಡೆ ನಮೂದಿಸಿದೆ.

ಗಿರಿಜನರ ಉಪಯೋಗಕ್ಕಾಗಿ

ಹುಣಸೂರು ವಿಭಾಗ (ಕೊಡಗು ಜಿಲ್ಲೆಯಲ್ಲಿ ಬರುವ ಭಾಗ)

೧.	ಮನೆಗಳನ್ನು ಕಟ್ಟುವುದು	... ೨೫ ಮನೆಗಳು
೨.	ಲಾಗಿಂಗ್ ಕೆಲಸದಲ್ಲಿ ತರಬೇತಿ ಕೊಡುವುದು	... ೧೦ ಸ್ಥಳ/೧೦ ಫಲಾನುಭವಿಗಳಿ
೩.	ಸಾಮಾಜಿಕ ಭದ್ರತಾ ನೆಡುತೋಪು ಬೆಳಿಸುವುದು	... ೭ ಹೆಕ್ಟೇರ್
೪.	ಬಾವಿ ತೋಡುವುದು	... ೧ ಬಾವಿ

ಗಿರಿಜನರಿಗಾಗಿ ಅರಣ್ಯ ಇಲಾಖೆಯಿಂದ ಈ ಕೆಳಗಿನ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ

೧.	ಮನೆಗಳಿಗೆ ಚುಲ್ಲಾ ಸರಬರಾಜು ಮಾಡುವುದು	... ೧೦ ಚುಲ್ಲಾಗಳು
೨.	ಸಾಮಾಜಿಕ ಭದ್ರತಾ ನೆಡುತೋಪು ಬೆಳೆಸುವುದು	... ೭ ಹೆಕ್ಟೇರ್

ಗಿರಿಜನರ ಆರ್ಥಿಕ ಸುಧಾರಣೆಗಾಗಿ ೧೯೮೬–೮೭ನೇ ಸಾಲಿನಲ್ಲಿ ಈ ಕೆಳಗಿನಂತಿವೆ.

೧.	ಉಚಿತ ವಸತಿಗಳನ್ನು ಕಟ್ಟುವುದು	... ೩೫ ಫಲಾನುಭವಿಗಳು
೨.	ಬಂಜರು ಭೂಮಿ ವಿತರಣೆ	... ೨೫ ಫಲಾನುಭವಿಗಳು